**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ರವರ ನ್ಯಾಯಾಲಯ,**
ಕನಕಪುರ

**ಸಿ ಸಿ ನಂಃ1364/2019**

## ಃ ದೋಷಾರೋಪಣೆ ಃ

**ಶ್ರೀ. ಸುರೇಶ ಅಣ್ಣಪ್ಪ ಸವದಿ., ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ. ಎಫ್. ಸಿ ರವರ ನ್ಯಾಯಾಧೀಶರು,ಕನಕಪುರ , ಆದ ನಾನು ಈ ಕೆಳಗಿನ ಆರೋಪಿತರಾದ**

1. ಪುಟ್ಟಸ್ವಾಮಿ ಉಃ ಪುಟ್ಟಸ್ವಾಮಯ್ಯ
   ಬಿನ್ ಲೇಟ್ ಕೆಂಚಯ್ಯ
   ವಯಸ್ಸು78 ವರ್ಷಗಳು,

2. ನಾಗೇಶ್ ಬಿನ್ ಪುಟ್ಟಸ್ವಾಮಯ್ಯ
   ವಯಸ್ಸು 48 ವರ್ಷಗಳು

   ಮೇಲ್ಕಂಡ ಆರೋಪಿತರ ವಾಸಃ
   ಮರವೇಗೌಡನದೊಡ್ಡಿ ಗ್ರಾಮ
   ಬಿಡದಿ ಹೋಬಳಿ
   ರಾಮನಗರ ತಾಲ್ಲೂಕು ಮತ್ತು ಜಿಲ್ಲೆ.

**ಎಂಬ ನಿಮ್ಮಗಳ ಮೇಲೆ ಹೊರೆಸುವ ದೋಷಾರೋಪವೇನೆಂದರೆ -**

ಹಾರೋಹಳ್ಳಿ ಪೊಲೀಸ್ ಠಾಣಾ ಸರಹದ್ದು, ಈ ನ್ಯಾಯಾಲಯದ ವ್ಯಾಪ್ತಿಗೆ ಸೇರಿದ ಮಾರಸಂದ್ರ ಗ್ರಾಮದ ಸರ್ವೆ ನಂ.59/4 ಎ ರಲ್ಲಿನ 6 ಗುಂಟೆ ಜಮೀನನ್ನು ದಿನಾಂಕ.22.11.1968 ರಲ್ಲಿ ಮಾರಸಂದ್ರ ಗ್ರಾಮದ ಮಾರೇಗೌಡ ಉಃ ಕರಿಯಪ್ಪ ರವರು ಸದರಿ ಗ್ರಾಮದ ದೊಡ್ಡದುರ್ಗಪ್ಪನ ಮಗ ಮಾರ ಎಂಬುವರಿಂದ ಶುದ್ರ ಕ್ರಯಕ್ಕೆ ಕೊಂಡುಕೊಂಡಿದ್ದು, ಜಮೀನು ಕ್ರಯದಾರನಾದ ಕರಿಯಪ್ಪ ಆತನ ಹೆಂಡತಿ ದೇವಮ್ಮ, ಹೆಣ್ಣು ಮಕ್ಕಳಾದ ಕಮಲಮ್ಮ ಮತ್ತು ಚಿಕ್ಕತಾಯಮ್ಮ ರವರು ಜಮೀನಿನ ಸ್ವಾಧೀನಾನುಭವದಲ್ಲಿದ್ದು, ಸದರಿ ಸರ್ವೆ ನಂ.59/4 ಎ ರಲ್ಲಿರುವ 6 ಗುಂಟೆ ಜಮೀನನ್ನು ಕೊಂಡುಕೊಂಡಾಗ ಕೈತಪ್ಪಿನಿಂದ ಸರ್ವೆ ನಂ.59/4 ಎ ಬದಲು ಸರ್ವೆ ನಂ.59/2 ಎಂದು ಕ್ರಯಪತ್ರದಲ್ಲಿ ನಮೂದಾಗಿದ್ದು, ನಂತರ ಈಗ್ಗೆ 7-8 ವರ್ಷಗಳಲ್ಲಿ ಕ್ರಯದಾರರಾದ

ಮಾರೇಗೌಡ ಉಃ ಕರಿಯಪ್ಪ ಮೃತಪಟ್ಟಿದ್ದು, ಸದರಿ ಜಮೀನಿನ ದಾಖಲಾತಿಗಳನ್ನು ಸರಿಪಡಿಸಿಕೊಂಡಿಲ್ಲದ ಕಾರಣದಿಂದ ಇದನ್ನು ತಿಳಿದ 1 ನೇ ಆರೋಪಿಯಾದ ನೀವು ಚಾಸಾ-4 ಶ್ರೀಮತಿ ದೇವಮ್ಮ, ಚಾಸಾ-5 ಶ್ರೀಮತಿ ಕಮಲಮ್ಮ ಮತ್ತು ಚಾಸಾ-5 ಶ್ರೀಮತಿ ಚಿಕ್ಕತಾಯಮ್ಮ ರವರು ಜಮೀನಿನ ಸ್ವಾಧೀನಾನುಭವದಲ್ಲಿದ್ದರೂ ಸಹ ಅವರಿಗೆ ತಿಳಿಯದಂತೆ ತನ್ನ ಹೆಸರಿಗೆ ಸದರಿ ಜಮೀನಿನ ಪಹಣಿ ಬರುವಂತೆ ಮಾಡಿಕೊಂಡಿದ್ದು, ಈ ವಿಚಾರವನ್ನು ಯಾರಿಗೂ ತಿಳಿಸದೇ ಇದ್ದು, ಸದರಿ ಜಮೀನುದಾರರಾದ ಚಾಸಾ-4 ರಿಂದ 6 ರವರು ಜಮೀನು ಮಾರಾಟ ಮಾಡುತ್ತಾರೆಂದು ತಿಳಿದು ಅವರಿಗೆ ಮೋಸ ಮಾಡುವ ಉದ್ದೇಶದಿಂದ 1 ನೇ ಆರೋಪಿಯಾದ ನೀವು ನಿಮ್ಮ ಎರಡನೇ ಮಗನಾದ 2 ನೇ ಆರೋಪಿಯ ಹೆಸರಿಗೆ ದಿನಾಂಕ.05.03.2012 ರಂದು ವಿಭಾಗ ಪತ್ರವನ್ನು ಮಾಡಿ ನೊಂದಣಿ ಮಾಡಿಕೊಟ್ಟಿದ್ದು, ಭಾ.ದಂ.ಸಂಹಿತೆ ಕಲಂ 420 ಸಹವಾಚಕ 34 ರಂತೆ ದಂಡಿಸಲ್ಪಡುವ ಅಪರಾದ ಎಸಗಿರುತ್ತೀರಿ ಎಂದು ನಿಮ್ಮಗಳ ಮೇಲೆ ಮೇಲೆ ಆರೋಪ ಇದೆ.

ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಗಳಾದ ನೀವುಗಳು ಚಾಸಾ-4 ರಿಂದ 6 ರವರು ಚಾಸಾ-1 ರವರಿಗೆ ದಿನಾಂಕ.24.05.2012 ರಂದು ಸದರಿ ಸರ್ವೆ ನಂ.59/4 ಎ ರ 6 ಗುಂಟೆ ಜಮೀನನ್ನು ರೂ.3,30,000/- ಗಳಿಗೆ ಮಾರಾಟ ಮಾಡಿದಾಗಲೂ 1 ನೇ ಆರೋಪಿಯಾದ ನೀವು ನಿಮ್ಮ ಮಗ 2 ನೇ ಆರೋಪಿಗೆ ವಿಭಾಗ ಪತ್ರ ಮಾಡಿಕೊಂಡಿರುವ ವಿಚಾರವನ್ನು ಮುಚ್ಚಿಟ್ಟು ವಂಚಿಸಿದ್ದು, ಭಾ.ದಂ.ಸಂಹಿತೆ ಕಲಂ 120(ಬಿ) ಸಹವಾಚಕ 34 ರಂತೆ ದಂಡಿಸಲ್ಪಡುವ ಅಪರಾದ ಎಸಗಿರುತ್ತೀರಿ ಎಂದು ನಿಮ್ಮಗಳ ಮೇಲೆ ಮೇಲೆ ಆರೋಪ ಇದೆ.

ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಗಳಾದ ನೀವುಗಳು ಜಮೀನನ್ನು 2 ನೇ ಆರೋಪಿ ಹೆಸರಿಗೆ ಮಾಡಿ ಚಾಸಾ-1, 4 ರಿಂದ 6 ರವರಿಗೆ ನಂಬಿಕೆದ್ರೋಹ ಮಾಡಿ ಆ ಮೂಲಕ ಭಾ.ದಂ.ಸಂಹಿತೆ ಕಲಂ 406 ಸಹವಾಚಕ 34 ರಂತೆ ದಂಡಿಸಲ್ಪಡುವ ಅಪರಾದ ಎಸಗಿರುತ್ತೀರಿ ಎಂದು ನಿಮ್ಮಗಳ ಮೇಲೆ ಮೇಲೆ ಆರೋಪ ಇದೆ.

ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಗಳಾದ ನೀವುಗಳು ಈ ಮೇಲೆ ತಿಳಿಸಿದ ಕೃತ್ಯ ಮಾಡಿ ಸುಳ್ಳು ವಿಭಾಗ ಪತ್ರದ ಮೂಲಕ ಸುಳ್ಳು ಪಹಣಿಯನ್ನು ನಿಮ್ಮ ಹೆಸರಿಗೆ ಸೃಷ್ಟಿಸುವ ಮೂಲಕ ಭಾ.ದಂ.ಸಂಹಿತೆ ಕಲಂ 465 ಸಹವಾಚಕ 34 ರಂತೆ ದಂಡಿಸಲ್ಪಡುವ ಅಪರಾದ ಎಸಗಿರುತ್ತೀರಿ ಎಂದು ನಿಮ್ಮಗಳ ಮೇಲೆ ಮೇಲೆ ಆರೋಪ ಇದೆ.

ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಗಳಾದ ನೀವುಗಳು ಚಾಸಾ-1, 4 ರಿಂದ 6 ರವರಿಗೆ ಮೋಸ ಮಾಡುವ ಸಲುವಾಗಿ ಸುಳ್ಳು ವಿಭಾಗ ಪತ್ರ ಸೃಷ್ಟಿಸಿ ಆ ಮೂಲಕ ಭಾ.ದಂ.ಸಂಹಿತೆ ಕಲಂ 468 ಸಹವಾಚಕ 34 ರಂತೆ ದಂಡಿಸಲ್ಪಡುವ ಅಪರಾದ ಎಸಗಿರುತ್ತೀರಿ ಎಂದು ನಿಮ್ಮಗಳ ಮೇಲೆ ಮೇಲೆ ಆರೋಪ ಇದೆ.

**ಮೇಲಿನ ಆಪಾದನೆಯು ಈ ನ್ಯಾಯಾಲಯದ ಸಂಜ್ಞಾನದೊಳಗೆ ನಡೆದಿದ್ದು ಆ ಕಾರಣ ನಿಮ್ಮನ್ನು ಮೇಲ್ಕಂಡ ಆಪಾದನಾ ವಿಚಾರಣೆಗೆ ಗುರಿಪಡಿಸಿದ್ದೇನೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆಎಂಎಫ್‌ಸಿ, ಕನಕಪುರ.**

**ಪ್ರಧಾನ ನ್ಯಾಯಿಕ ದಂಡಾಧಿಕಾರಿಗಳು ಕನಕಪುರ ರವರ ನ್ಯಾಯಾಲಯ, ಕನಕಪುರ.**
**ಸಿ.ಸಿ. ನಂ.**1364/2019

ಹಾರೋಹಳ್ಳಿ ಪೊಲೀಸ್ ಠಾಣೆ ವಿರುದ್ದ

1. ಪುಟ್ಟಸ್ವಾಮಿ ಉಃ ಪುಟ್ಟಸ್ವಾಮಯ್ಯ
ಬಿನ್ ಲೇಟ್ ಕೆಂಚಯ್ಯ
ವಯಸ್ಸು78 ವರ್ಷಗಳು,

2. ನಾಗೇಶ್ ಬಿನ್ ಪುಟ್ಟಸ್ವಾಮಯ್ಯ
ವಯಸ್ಸು 48 ವರ್ಷಗಳು

:: **ಆಪಾದನೆ** ::

1. ನಿಮಗೆ ಓದಿ ಹೇಳಿದ ಆಪಾದನೆ ಅರ್ಥವಾಯಿತಾ?

ಉತ್ತರಃ-

2. ನೀವು ತಪ್ಪು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಆಗಬೇಕಾ?

ಉತ್ತರಃ-

ಮೇಲಿನ ಹೇಳಿಕೆಯನ್ನು ಆಪಾದಿತರಿಗೆ ತಿಳಿಯುವಂತೆ ಆತನ ಭಾಷೆಯಲ್ಲಿ ಓದಿ, ಹೇಳಿ ತಿಳಿಸಿ ಅವರ ಹೇಳಿಕೆ ಪಡೆದುದಾಗಿ ದೃಢೀಕರಿಸಿರುತ್ತೇನೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ., ಕನಕಪುರ

ಆರೋಪಿತರ ಸಹಿ

1.

2.